**ಕರ್ನಾಟಕ ಸರ್ಕಾರ**

ಸಂಖ್ಯೆ: ಬಿಇಸಿ/ಐಪಿಜಿ/90/2018-19

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ಆಯುಕ್ತಾಲಯ, ಆನಂದ ರಾವ್ ವೃತ್ತ,
ಬೆಂಗಳೂರು. ದಿನಾಂಕ:25.03.2019

ಇವರಿಗೆ,

1) ನಿರ್ದೇಶಕರು,
ವೈದ್ಯಕೀಯ ಶಿಕ್ಷಣ, ಬೆಂಗಳೂರು.

2) ಕಾರ್ಯಕಾರಿ ನಿರ್ದೇಶಕರು,
ಕರ್ನಾಟಕ ಪರೀಕ್ಷಾ ಪ್ರಾಧಿಕಾರ,
ಮಲ್ಲೇಶ್ವರಂ, 18ನೇ ಕ್ರಾಸ್,
ಬೆಂಗಳೂರು-560012.

ಮಾನ್ಯರೆ,

ವಿಷಯ:- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸೇವಾನಿರತ ವೈದ್ಯಕೀಯ ವೈದ್ಯರುಗಳು 2019-20 ನೇ ಸಾಲಿಗೆ NEET PG 2019 ರ ಸ್ನಾತಕೋತ್ತರ ವ್ಯಾಸಂಗದ ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾಗಿರುವ ವೈದ್ಯರುಗಳ ಪರಿಷ್ಕೃತ ಅಂತಿಮ ಅರ್ಹತಾ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:-

1. ನ್ಯಾಷನಲ್ ಬೋರ್ಡ್ ಆಫ್ ಎಕ್ಸಾಮಿನೇಷನ್, (NEET-PG) NEET-2019, ಕೈಪಿಡಿ(ಬ್ರೋಚರ್). ದಿನಾಂಕ: 02.11.2018.
2. ಆಯುಕ್ತಾಲಯದ ಸುತ್ತೋಲೆ ಸಂ: ಬಿಇಸಿ/ಐಪಿಜಿ/90/2018-19, ದಿನಾಂಕ:22.12.2018.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 334 ಆರ್‌ಜಿಯು 2012, ದಿ:23.11.2013.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 375 ಆರ್‌ಜಿಯು 2013, ದಿ:18.01.2014.
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 593 ಎಂಪಿಎಸ್ 2010, ದಿ:18.01.2011 (07.04.2011).
6. ಸರ್ಕಾರದ ಆದೇಶ ಸಂಖ್ಯೆ: ಆಕುಕ 342 ಹೆಚ್‌ಎಸ್‌ಹೆಚ್ 2008, ದಿ:29.01.2010.
7. ಸರ್ಕಾರದ ಅಧಿಸೂಚನೆ ಸಂ: ಆಕುಕ 54 ಆರ್‌ಜಿಯು 2019, ದಿನಾಂಕ: 08.03.2019.
8. ಇದೇ ಕಛೇರಿಯ ಸಮ ಪತ್ರ ಸಂಖ್ಯೆ ದಿನಾಂಕ: 18.03.2019

*****

ಈ ವಿಷಯಕ್ಕೆ ಸಂಬಂಧಿಸಿದಂತೆ 2019-20 ನೇ ಸಾಲಿಗೆ ಉಲ್ಲೇಖ (1) ರನುಸಾರ ಸೇವಾನಿರತ ವೈದ್ಯಕೀಯ ಸ್ನಾತಕೋತ್ತರ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ವೈದ್ಯರುಗಳ ಒಟ್ಟು ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಅನುಬಂಧ-01 ವೈದ್ಯಕೀಯ**

| | | |
|---|---|---|
| 1. | ಒಟ್ಟು ಸ್ವೀಕೃತಗೊಂಡಿರುವ ಅರ್ಜಿಗಳು ವೈದ್ಯಕೀಯ | 196 |
| 2. | ಪ್ರವೇಶ ಪರೀಕ್ಷೆಯಲ್ಲಿ ಅನರ್ಹರಾಗಿರುವ ಸೇವಾನಿರತ ವೈದ್ಯಕೀಯ ವೈದ್ಯರುಗಳು | 124 |
| 3. | ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾಗಿರುವ 5 ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿರುವ ವೈದ್ಯರುಗಳು | 43 |
| 4 | ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾಗಿರುವ 3 ವರ್ಷಕ್ಕೂ ಹೆಚ್ಚು 5 ವರ್ಷಗಳ ಒಳಗಿನ ಸೇವೆ ಸಲ್ಲಿಸಿರುವ ವೈದ್ಯರುಗಳು | 28 |
| 5. | ಕೆ.ಸಿ.ಎಸ್.ಆರ್. ನಿಯಮ 61 ಅಪೆಂಡಿಕ್ಸ್ 2ಎ ರನ್ವಯ ಖಾಯಂ ಪೂರ್ವ ಘೋಷಣೆಯಾಗದೆ ಅನರ್ಹರಾಗಿರುವ ವೈದ್ಯರುಗಳು | 01 |

**ಅನುಬಂಧ-02 ರಲ್ಲಿನ ಕ್ರ.ಸಂ. 01 ರಿಂದ 28 ರವರೆಗಿನ ವೈದ್ಯಕೀಯ ವೈದ್ಯರುಗಳು ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾಗಿರುವ ಸೇವಾನಿರತ ವೈದ್ಯರುಗಳ ವಿರುದ್ಧ ಯಾವುದೇ ವ್ಯತಿರಿಕ್ತ ಷರಾ ಇಲ್ಲದಿರುವುದರಿಂದ ಇವರುಗಳಗೆ ನಿರಾಕ್ಷೇಪಣೆಯೊಂದಿಗೆ ಸಮಾಲೋಚನೆಯಲ್ಲಿ ಭಾಗವಹಿಸಲು ಅನುಮತಿ ನೀಡಲಾಗಿದೆ.**

ಡಾ: ನೀಲಪ್ಪ ಕೆ. ಪೂಜಾರಿ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಹೊಳೆಆಲೂರು, ರೋಣ ತಾ: ಗದಗ ಜಿಲ್ಲೆ ಇವರಿಗೆ ಸರ್ಕಾರದ ಆದೇಶ ಸಂ: ಆಕುಕ 181 ಹೆಚ್‌ಎಸ್‌ಹೆಚ್ 2019, ಬೆಂಗಳೂರು, ದಿನಾಂಕ: 25.03.2019ರನುಸಾರ ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿರುವುದರಿಂದ ಸೇರ್ಪಡೆಗೊಳಿಸಿ ಅನುಬಂಧ-2 ರಲ್ಲಿ ಕ್ರ.ಸಂ. 01 ರಿಂದ 28 ರವರೆಗಿನ ವೈದ್ಯರುಗಳ ವಿರುದ್ದ ಯಾವುದೇ ಇಲಾಖಾ ವಿಚಾರಣೆ ಇಲ್ಲದಿರುವುದರಿಂದ ಅರ್ಹರಾಗಿರುವ ಸೇವಾನಿರತ ವೈದ್ಯರುಗಳ ಪಟ್ಟಿಯನ್ನು ಕ್ರಮಬದ್ಧಗೊಳಿಸಿ ಪರಿಷ್ಕೃತ ಅಂತಿಮ ಅರ್ಹತಾ ಪಟ್ಟಿಯನ್ನು ಸೇವಾ ಮಾಹಿತಿಯೊಂದಿಗೆ ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

**ನಿರ್ದೇಶಕರು,**
**ಆರೋಗ್ಯ ಮತ್ತು ಕು.ಕ. ಸೇವೆಗಳು.**
**ಬೆಂಗಳೂರು.**

ಪ್ರತಿಯನ್ನು:-

ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರಿಗೆ ರವಾನಿಸುತ್ತಾ ಈ ಮಾಹಿತಿಯನ್ನು ಈ ಕೂಡಲೇ ಇಲಾಖೆಯ ವೈಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.